ಸ್ಟೇಷನ್ನಿಗೆ ಅರ್ಧಫರ್ಲಾಂಗ್ ಈ ಕಡೆ ಊರಿನ ದೊಡ್ಡಗುಡಿ. ಸೂರಿ ಹುಡುಗನಾಗಿದ್ದಾಗ ದಿನವೂ ಸಂಜೆ ಅಲ್ಲಿಗೆ ಹೋಗಿ ನಮಸ್ಕಾರ ಹಾಕಿ ಬರುತ್ತಿದ್ದ. ಆ ಗುಡಿಯೆಂದರೆ ಅತ್ಯಂತ ಶ್ರದ್ಧಾಭಕ್ತಿ. ತಾನು ಪರೀಕ್ಷೆಗಳನ್ನು ಪಾಸು ಮಾಡಿದ್ದು ಅದರ ಬಲದಿಂದಲೇ ಎಂದು ಅವನ ನಂಬಿಕೆ.

ಮಧ್ಯಾಹ್ನದ ಹೊತ್ತು ಗುಡಿಯ ಬಾಗಿಲು ಹಾಕಿರುತ್ತಿತ್ತು. ಬೆಳಗ್ಗೆ, ಸಂಜೆ ಭಕ್ತಾದಿಗಳಿಂದ ಗಿಜಿಗಿಜಿ ಗುಟ್ಟುತ್ತಿದ್ದ ಗುಡಿಯ ಮುಂಭಾಗ 'ಬಿಕೋ' ಅನ್ನುತ್ತಿತ್ತು. ಅದರ ಮುಂದೆ ಬಂದಾಗ ಸೂರಿ ಷರೀಫನಿಗೆ ಥಟ್ಟನೆ ಗಾಡಿ ನಿಲ್ಲಿಸುವಂತೆ ಹೇಳಿದ. ಗಾಡಿಯಿಂದ ಇಳಿದು, ಜೋನಿಗೂ 'ಇಳಿ' ಎಂದು ಹೇಳಿ ಇಳಿಸಿದ. ಗುಡಿಯ ಮುಂದೆ ಅವಳನ್ನೂ ಪಕ್ಕದಲ್ಲಿ ನಿಲ್ಲಿಸಿಕೊಂಡು ನಿಂತ. ಅವಳ ಕೈಹಿಡಿದು ಧರ್ಮಪತ್ನಿಯೊ ಎಂಬಂತೆ. ಅವನ ಕೈ ಅವಳ ಕೈಯನ್ನು ಹಿಡಿದಿತ್ತು, ಕತ್ತು ಬಗ್ಗಿಸಿ, ಕಣ್ಣು ಮುಚ್ಚಿ ಮನಸ್ಸಿನಲ್ಲೇ ಎಲ್ಲೋ ಯಾರದ್ದೋ ಮದುವೆಯಲ್ಲಿ ಕೇಳಿ ಜ್ಞಾಪಕದಲ್ಲಿ ಉಳಿದಿದ್ದ 'ಪಾಣಿ ಗ್ರಹಣಂ ಕರಿಷ್ಯಾಮಿ, ಓಂ ಸ್ವಸ್ತಿ, ಓಂ ಶಾಂತಿ' ಎಂದು ಒದರಿದ. ಜೋನಿಗೂ ನೀನೂ ಮನಸ್ಸಿನಲ್ಲಿ ಪ್ರಾರ್ಥಿಸಿಕೋ ಅಂದ. ಅವಳು ತಮ್ಮ ಜನರ ಮಾಯಮಾಟ, ಮಂತ್ರತಂತ್ರಗಳ ಬಗ್ಗೆ ಕೇಳಿ ತಿಳಿದಿದ್ದಳು. ಇದೇನೋ ಅಂತಹದಿರಬೇಕು ಎಂದು ಅವಳ ಮೈ ನಡುಗಿತು. ಆದರೂ ಮರುಮಾತನಾಡದೆ ಕೈ ಹಿಡಿದು ನಿಂತಿದ್ದಳು. ಅಲ್ಲಿಂದ ಹೊರಡುವಾಗ 'ಅದೇನು ನೀನು ಮಾಡಿದ್ದು' ಎಂದು ಕೇಳಿದಳು. 'ಗಾಂಧರ್ವ ವಿವಾಹ, ದುಷ್ಯಂತ ಶಕುಂತಲೆಯೊಡನೆ ಮಾಡಿಕೊಂಡಂತೆ' ಅಂದ ಸೂರಿ. ಅವಳಿಗೆ ಅರ್ಥವಾಗಲಿಲ್ಲ. ಅದನ್ನು ವಿವರಿಸಲು ಮಾನಸಿಕ ಸಿದ್ಧತೆ ಮಾಡಿಕೊಳ್ಳುವಷ್ಟರಲ್ಲಿ ಸಂಜೆಯ ನಾಲ್ಕರ ಗಾಡಿಯಾಗಲೇ ಸೇತುವೆ ದಾಟುತ್ತ ನೀಳವಾಗಿ ಸಿಳ್ಳು ಹೊಡೆದದ್ದು ಕೇಳಿಸಿತು. ಮಾತು ಅಲ್ಲಿಗೇ ನಿಂತಿತು. ಸ್ಟೇಷನ್ ತಲುಪಿದ ತಕ್ಷಣ ಅವಳಿಗೆ 'ನೀನು ಸೀಟ್ ಹುಡುಕು, ನಾನು ಟಿಕೆಟ್ ತರುತ್ತೇನೆ' ಎಂದವನೇ ಟಿಕೆಟ್ ಕಿಟಕಿಯ ಕಡೆ ನುಗ್ಗಿದ. ಟಿಕೆಟ್ ಕೊಂಡು ಅವಳು ಕೂತಿದ್ದ ಫಸ್ಟ್‌ಕ್ಲಾಸ್ ಕಂಪಾರ್ಟ್‌ಮೆಂಟ್ ತಲಪುವ ಹೊತ್ತಿಗೆ ಗಾರ್ಡ್ ವಿಷಲ್ ಊದಿ, ಹಸಿರು ಬಾವುಟ ಆಡಿಸುತ್ತಿದ್ದ. ಅವಳ ಕೈಗೆ ಟಿಕೆಟ್ ತುರುಕುತ್ತ, ಉಕ್ಕಿ ಬರುತ್ತಿದ್ದ ಭಾವನೆಗಳನ್ನು ಹತ್ತಿಕ್ಕಿಕೊಂಡು 'ಹೆಚ್ಚು ದಿನ ಮಾಡಬೇಡ, ನಾನೆಲ್ಲ ರೆಡಿ ಮಾಡುತ್ತೇನೆ, ಬೇಗ ಬಂದು ಬಿಡು. ನಿಮ್ಮ ತಂದೆತಾಯಿಯೂ ಬರಬೇಕು' ಅನ್ನುವಾಗ ರೈಲಿನ ಇಂಜಿನ್ನು ಝೊಯ್ಯೆಂದು ಬಿಳಿಯ ಸ್ಟೀಮ್ ಕಬ್ಬೊಗೆಗಳನ್ನುಗುಳುತ್ತ ಕಿವಿ ಕಿವುಡಾಗುವಂತೆ ಸಿಳ್ಳು ಹಾಕುತ್ತ ಹೊರಟಿತು. ಅದರ ಆರ್ಭಟದಲ್ಲಿ ಅವನ 'ಬೆಬ್ಬೆಬ್ಬೆ'ಸ ಅವಳಿಗೆ ಕೇಳಿಸಲಿಲ್ಲ. ಅವಳು ಸುಮ್ಮನೆ 'ಥ್ಯಾಂಕ್ಸ್ ಫಾರ್ ಎವೆರಿಥಿಂಗ್' ಅಂದಳು. ಜತೆಗೇ ಅವಳು ಬಿಟ್ಟ ನಿಟ್ಟುಸಿರು ಸೂರಿಗೆ ಕೇಳಿಸಲಿಲ್ಲ, ಅದರ ಅರ್ಥವಂತೂ ದೂರವೇ ಉಳಿಯಿತು.

ಗಾಡಿ ಹೋದ ಮೇಲೆ ಅದು ಹೋದ ದಿಕ್ಕನ್ನೇ ಬಹಳ ಹೊತ್ತು ನೋಡುತ್ತ ನಿಂತಿದ್ದ. ಅವನ ಹೃದಯದಲ್ಲಿ ವಿಚಿತ್ರವಾದ ಬೆರಕೆ ಭಾವನೆಗಳು ಹೊಯ್ದಾಡುತ್ತಿದ್ದವು. ಯಾವುದೋ ಒಂದು ಹೊಸ ಜಗತ್ತನ್ನು ಗೆದ್ದಂತೆ, ಇದ್ದ ಒಂದು ಜೋನಿಯ ಹಿಂದೆಯೇ ಹೊರಟು ಹೋದಂತೆ, ಸ್ಟೇಷನ್ನಿನಲ್ಲಿ ಈಗ ಯಾರೂ ಇರಲಿಲ್ಲ. ಎಲ್ಲ ಯಾವಾಗಲೋ ಹೋಗಿ ಅಲ್ಲಿ ಖಾಲಿ ಬಡಿದಿತ್ತು. ಸೂರಿ ಹೊರ ಬಂದಾಗ ಷರೀಫ ಬಾಡಿಗೆಗೆ ಕಾಯುತ್ತಿದ್ದ.

## 3

ಸೂರಿ ಮನೆಗೆ ಬರುವ ಹೊತ್ತಿಗೆ ತಾಯಿ ಗೌರಮ್ಮ ಎಂದೂ ಹಾಗೆ ಮಾಡದಿದ್ದವರು, ಜಗಲಿಯ ಕಂಬಕ್ಕೆ ಆತುಕೊಂಡು ಇವನಿಗೇ ಕಾಯುತ್ತಿದ್ದರು. ಅವರ ಮುಖದಲ್ಲಿ ಯಾವುದೋ ದುಗುಡ ಕುದಿಯುತ್ತಿತ್ತು. ಸೂರಿ ಒಳಗೆ ಬಂದು ಚಪ್ಪಲಿ ತೆಗೆಯುವಾಗ ಅವರು ಅವನ ಕೈಬೆರಳುಗಳ ಕಡೆಯೇ ನೋಡುತ್ತ 'ಮಗೂ' ಎಂದರು. ಸೂರಿ ಗುರುತಿಸಿದನೊ ಇಲ್ಲವೊ, ಆ ಧ್ವನಿಯಲ್ಲಿ ಏನೋ ಆತಂಕ ತುಂಬಿತ್ತು. ಸೂರಿ 'ಏನಮ್ಮಾ ಅದು' ಅಂತ ಗೊಣಗಿದ. ದಣಿದು ಡ್ಯೂಟಿಯಿಂದ ಬಂದಿರುವಾಗ